# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : 170 (254) |
| ಮಾನ್ಯ ಸದಸ್ಯರ ಹೆಸರು | : ಶ್ರೀ ಮಂಜುನಾಥ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : 16.07.2024 |
| ಉತ್ತರಿಸಬೇಕಾದ ಸಚಿವರು | : ಮಾನ್ಯ ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯದಲ್ಲಿ ಇರುವ ಕೃಷಿ ಉತ್ಪನ್ನ ಮಾರುಕಟ್ಟೆಗಳ ಸಂಖ್ಯೆ ಎಷ್ಟು; ಯಾವ ಯಾವ ಜಿಲ್ಲೆಗಳಲ್ಲಿ ಎಪಿಎಂಸಿ ಕಟ್ಟಡಗಳು ಇವೆ; ಅಲ್ಲಿರುವ ಸೌಲಭ್ಯಗಳು ಯಾವುವು; ನಿರ್ವಹಣೆ ಯಾರು ಮಾಡುತ್ತಿದ್ದಾರೆ. ಈ ಎಪಿಎಂಸಿ ಕಟ್ಟಡಗಳಲ್ಲಿ ಕೃಷಿ ಉತ್ಪನ್ನಗಳನ್ನು ಗ್ರಾಹಕರಿಗೆ ರೈತರಿಂದ ನೇರ ಖರೀದಿಸಲು ಅವಕಾಶ ನೀಡಲಾಗುತ್ತಿದೆಯೇ; (ವಿವರ ನೀಡುವುದು) | ರಾಜ್ಯದಲ್ಲಿ 168 ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಿದ್ದು, ರಾಜ್ಯದಲ್ಲಿನ ಎಲ್ಲಾ ಜಿಲ್ಲೆಗಳ ವ್ಯಾಪ್ತಿಯಲ್ಲಿ ಬರುವ 168 ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳ ಪ್ರಾಂಗಣಗಳಲ್ಲಿ ಕಟ್ಟಡಗಳನ್ನು ನಿರ್ಮಿಸಲಾಗಿದೆ.<br><br>ರಾಜ್ಯದ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಲ್ಲಿ ಅಗತ್ಯ ಮೂಲಭೂತ ಸೌಕರ್ಯಗಳಾದ ಕುಡಿಯುವ ನೀರಿನ ವ್ಯವಸ್ಥೆ, ಶೌಚಾಲಯ, ವಿದ್ಯುತ್ ಸೌಲಭ್ಯ, ರಸ್ತೆಗಳು, ಗೋದಾಮುಗಳು, ಮುಚ್ಚು ಹರಾಜುಕಟ್ಟೆ, ಒಣಗಿಸುವ ಕಟ್ಟೆ, ರೈತಭವನ, ತೂಕದ ಯಂತ್ರ, ಸೈಲೋ, ಶೀತಲಗೃಹ, ಕ್ಲೀನಿಂಗ್, ಗ್ರೇಡಿಂಗ್ ಮತ್ತು ಪ್ಯಾಕಿಂಗ್ ಘಟಕ, ಅಸ್ಸೆಯಿಂಗ್ ಲ್ಯಾಬ್, ಕುರಿ ಮತ್ತು ಮೇಕೆ ಸಂತೆ ಅಭಿವೃದ್ಧಿ, ಇತ್ಯಾದಿಗಳನ್ನು ಅವಶ್ಯಕತೆಗೆ ಅನುಗುಣವಾಗಿ ಮಾರುಕಟ್ಟೆ ಸಮಿತಿಗಳ ನಿಧಿ ಹಾಗೂ ರಾಜ್ಯ ಮತ್ತು ಕೇಂದ್ರ ಸರ್ಕಾರದ ಅನುದಾನದಲ್ಲಿ ಒದಗಿಸಲಾಗುತ್ತಿದೆ.<br><br>ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳ ಪ್ರಾಂಗಣಗಳಲ್ಲಿ ಅರ್ಹ ಪೇಟೆ ಕಾರ್ಯಕರ್ತರಿಗೆ ಲೀವ್ ಅಂಡ್ ಲೈಸೆನ್ಸ್ ಆಧಾರದಲ್ಲಿ ಹಂಚಿಕೆ ಮಾಡಿರುವ ಕಟ್ಟಡಗಳನ್ನು ಮಾರುಕಟ್ಟೆ ಸಮಿತಿಯು ನಿರ್ವಹಣೆ ಮಾಡುತ್ತಿದೆ. ಲೀಸ್ ಕಂ ಸೇಲ್ ಆಧಾರದ ಮೇಲೆ ನಿವೇಶನ ಪಡೆದು ಕಟ್ಟಡ ನಿರ್ಮಿಸಿಕೊಂಡಿರುವುದು/ಕಟ್ಟಡ ಹಂಚಿಕೆ ಪಡೆದಿರುವವರು ನಿರ್ವಹಣೆಯನ್ನು ಅವರೇ ಮಾಡಿಕೊಳ್ಳುತ್ತಾರೆ. ಸಮಿತಿ ವಶದಲ್ಲಿರುವ ಕಟ್ಟಡಗಳ ನಿರ್ವಹಣೆಯನ್ನು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳ ವತಿಯಿಂದ ನಿರ್ವಹಿಸಲಾಗುತ್ತದೆ.<br><br>ಯಲಹಂಕದಲ್ಲಿ ರೈತರ ಸಂತೆಯನ್ನು ನಿರ್ಮಿಸಿ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಲಾಗಿದ್ದು, ರೈತರಿಂದ ಗ್ರಾಹಕರು ನೇರವಾಗಿ ಕೃಷಿ ಉತ್ಪನ್ನಗಳನ್ನು ಖರೀದಿಸಲು ಅವಕಾಶ ಕಲ್ಪಿಸಲಾಗಿದೆ.<br><br>ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ ಮತ್ತು ಅಭಿವೃದ್ಧಿ) ಅಧಿನಿಯಮ, 1966ರ ಕಲಂ 63(2)(ii-ಎ) ರಡಿ ಸ್ಥಳೀಯ ಬಳಕೆಗಾಗಿ ಉತ್ಪಾದಕರಿಂದ ಗ್ರಾಹಕರಿಗೆ ನೇರ ಮಾರಾಟಕ್ಕಾಗಿ ಬೇಡಿಕೆಯನ್ವಯ ಸ್ಥಳವನ್ನು ಗುರುತಿಸಿ ಸೌಲಭ್ಯ ಒದಗಿಸಲು ಕಾಯ್ದೆಯಡಿ ಅವಕಾಶ ಕಲ್ಪಿಸಲಾಗಿದೆ. |

| | | |
|---|---|---|
| (ಆ) | ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಎಷ್ಟು ಎಪಿಎಂಸಿ ಕಟ್ಟಡಗಳು ಹಾಗೂ ಮಾರುಕಟ್ಟೆಗಳು ಇವೆ; ಅವುಗಳಲ್ಲಿ ವ್ಯವಹಾರ ನಡೆಸಲಾಗುತ್ತಿದೆಯೇ; (ವಿವರಗಳನ್ನು ನೀಡುವುದು) | ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳ ವ್ಯಾಪ್ತಿಯಲ್ಲಿನ ಮುಖ್ಯ ಮಾರುಕಟ್ಟೆ/ಉಪ ಮಾರುಕಟ್ಟೆಗಳ, ಕಟ್ಟಡಗಳ ಹಾಗೂ ವ್ಯವಹಾರ ನಡೆಸಲಾಗುತ್ತಿರುವ ವಿವರ ಹಾಗೂ ಮಾಹಿತಿಯನ್ನು **ಅನುಬಂಧ-1** ರಲ್ಲಿ ಒದಗಿಸಿದೆ. |
| (ಇ) | ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಹಲವಾರು ಗ್ರಾಮಾಂತರ ಪ್ರದೇಶಗಳಲ್ಲಿ ಎಪಿಎಂಸಿ ಮಾರುಕಟ್ಟೆಗಳು ನಿರ್ಮಿಸಿದ್ದು, ಅವುಗಳಲ್ಲಿ ಯಾವುದೇ ಮಾರುಕಟ್ಟೆ ವ್ಯವಹಾರಗಳು ನಡೆಯುತ್ತಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಅವುಗಳನ್ನು ಬಹುಪಯೋಗಿ ಕಟ್ಟಡ ಗಳನ್ನಾಗಿ ಪರಿವರ್ತಿಸಲು ಸರ್ಕಾರ ಕ್ರಮ ವಹಿಸಲು ಯೋಚಿಸಿದೆಯೇ; (ವಿವರ ನೀಡುವುದು) | ಈ ರೀತಿ ವರದಿಯಾಗಿರುವುದಿಲ್ಲ. |
| (ಈ) | ಗ್ರಾಮಾಂತರ ಪ್ರದೇಶದಲ್ಲಿ ರೈತರಿಂದ ಬೆಳೆದ ಹಣ್ಣು, ಹಂಪಲು ತರಕಾರಿಗಳನ್ನು ಇಂತಹ ಮಾರುಕಟ್ಟೆ ಕಟ್ಟಡಗಳಲ್ಲಿ ನೇರವಾಗಿ ಗ್ರಾಹಕರಿಗೆ ಸಂತೆಯ ಮೂಲಕ ಮಾರಲು ಕ್ರಮ ಕೈಗೊಳ್ಳಲಾಗಿದೆಯೇ; ಈ ಕುರಿತು ಸರ್ಕಾರ ಯಾವುದಾದರೂ ಯೋಜಿತ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆಯೇ; | ದಕ್ಷಿಣ ಕನ್ನಡ ಜಿಲ್ಲೆ ಹಾಗೂ ಉಡುಪಿ ಜಿಲ್ಲೆಗಳ ಗ್ರಾಮೀಣಾ ಭಾಗದಲ್ಲಿರುವ ಉಪ ಮಾರುಕಟ್ಟೆಗಳಲ್ಲಿ ಹಣ್ಣು, ತರಕಾರಿ, ಜಾನುವಾರು, ದವಸ ಧಾನ್ಯಗಳ ಸಂತೆ ವಹಿವಾಟು ನಡೆಯುತ್ತಿದ್ದು, ನೇರವಾಗಿ ರೈತರಿಂದ ಗ್ರಾಹಕರು ಖರೀದಿಸುತ್ತಾರೆ. |
| (ಉ) | ಸರಿಯಾದ ಮಾರುಕಟ್ಟೆಗಳು ಇಲ್ಲದ ಕಾರಣ ಹೆಚ್ಚಿನ ಕೃಷಿಕರು ತಾವು ಬೆಳೆದ ಹಣ್ಣು ಹಂಪಲು ತರಕಾರಿ ಇತ್ಯಾದಿಗಳನ್ನು ವರ್ತಕರಿಗೆ ಮಾರುತ್ತಿದ್ದು, ರೈತರಿಗೆ ಸರಿಯಾದ ಬೆಲೆ ಸಿಗದೆ ಸಾರ್ವಜನಿಕರಿಗೂ ಒಳ್ಳೆಯ ಗುಣಮಟ್ಟದ ಆಹಾರ/ತರಕಾರಿ/ಹಣ್ಣು ಹಂಪಲು ಇತ್ಯಾದಿಗಳು ಕಡಿಮೆ ದರದಲ್ಲಿ ಲಭ್ಯವಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಈ ಕುರಿತು ಸರ್ಕಾರ ಯಾವ ಕಾರ್ಯಕ್ರಮ ಯೋಚಿಸಿದೆ? (ವಿವರ ನೀಡುವುದು) | ರಾಜ್ಯದ ಹಣ್ಣು, ಹೂವು ಮತ್ತು ತರಕಾರಿಗಳ (ವಿಶೇಷ) ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯನ್ನು ಬೆಂಗಳೂರಿನಲ್ಲಿ ಸ್ಥಾಪಿಸ ಲಾಗಿರುತ್ತದೆ.<br><br>ಇಲಾಖೆಯು ಎಲ್ಲಾ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳು ಹೆಚ್ಚು ಪರಿಣಾಮಕಾರಿ ಯಾಗಿ ಕಾರ್ಯನಿರ್ವಹಿಸಲು ಬೆಂಬಲ ನೀಡುತ್ತದೆ. |

ಸಂಖ್ಯೆ: ಸಿಒ 198 ಎಂಆರ್‌ಇ 2024

(ಶಿವಾನಂದ ಎಸ್. ಪಾಟೀಲ)
ಜವಳಿ, ಕಬ್ಬು ಅಭಿವೃದ್ಧಿ ಮತ್ತು
ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು

ಅನುಬಂಧ-1

# ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಯಲ್ಲಿರುವ ಮುಖ್ಯ ಮಾರುಕಟ್ಟೆ/ಉಪ ಮಾರುಕಟ್ಟೆಗಳು ಹಾಗೂ ಕಟ್ಟಡಗಳ ವಿವರ

| ಕ್ರ. ಸಂ. | ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳ ಹೆಸರು | ಮುಖ್ಯ/ ಉಪ ಮಾರುಕಟ್ಟೆಗಳ ವಿವರ | ಕಟ್ಟಡಗಳ ವಿವರ | ವ್ಯವಹಾರ ನಡೆಯುತ್ತಿರುವ ವಿವರ |
|---|---|---|---|---|
| | ದಕ್ಷಿಣ ಕನ್ನಡ ಜಿಲ್ಲೆ | | | |
| 1. | ಮಂಗಳೂರು | ಬೈಕಂಪಾಡಿ ಮುಖ್ಯ ಮಾರುಕಟ್ಟೆ | ಗೋದಾಮುಗಳು-164<br>ಗಾರ್ಬಲಿಂಗ್ ಶೆಡ್-08<br>ಅಂಗಡಿಮಳಿಗೆಗಳು-85ಅಂಗಡಿ-ವ-ಹರಾಜು ವೇದಿಕೆ-26<br>ರೈತಭವನ, ಕ್ಯಾಂಟೀನ್ ಕಟ್ಟಡ-01<br>ವೇಬ್ರಿಡ್ಜ್-01<br>ಅತಿಥಿ ಗೃಹ,<br>ಸಣ್ಣ ಮಳಿಗೆಗಳು-73<br>ಶುದ್ಧ ಕುಡಿಯುವ ನೀರಿನ ಘಟಕ, ಶೌಚಾಲಯಗಳು. | ಪೂರ್ಣ ಪ್ರಮಾಣದಲ್ಲಿ ವ್ಯವಹಾರ ನಡೆಯುತ್ತಿದೆ. |
| | | ಮೂಡಬಿದ್ರೆ ಉಪ ಮಾರುಕಟ್ಟೆ ಪ್ರಾಂಗಣ | 04 ಅಂಗಡಿಗಳು | ಸಣ್ಣ ಪ್ರಮಾಣದಲ್ಲಿ |
| 2. | ಪುತ್ತೂರು | ಮುಖ್ಯ ಮಾರುಕಟ್ಟೆ ಪ್ರಾಂಗಣ | ವಿವಿಧ ಅಳತೆಯ ಗೋದಾಮುಗಳು 133<br>ಸಂದ್ರಿ ಶಾಪ್ ಗಳು-06<br>ರೈತ ಸಭಾಭವನ-01<br>ಕ್ಯಾಂಟೀನ್ ಕಟ್ಟಡ-02<br>ಎ.ಟಿ.ಎಂ ಕೊಠಡಿ-01<br>ಸಂತೆ ಮಾರುಕಟ್ಟೆ ಇತ್ಯಾದಿ | ಪೂರ್ಣ ಪ್ರಮಾಣದಲ್ಲಿ ವ್ಯವಹಾರ ನಡೆಯುತ್ತಿದೆ. |
| | | ಉಪ್ಪಿನಂಗಡಿ ಉಪ ಮಾರುಕಟ್ಟೆ | - | ಸಣ್ಣ ಪ್ರಮಾಣದಲ್ಲಿ |
| | | ಕಡಬ ಉಪ ಮಾರುಕಟ್ಟೆ | 15 ವಾಣಿಜ್ಯ ಮಳಿಗೆಗಳು | ಸಣ್ಣ ಪ್ರಮಾಣದಲ್ಲಿ |
| | | ನಕ್ಕಿಲಾಡಿ ಉಪ ಮಾರುಕಟ್ಟೆ | - | ಸಣ್ಣ ಪ್ರಮಾಣದಲ್ಲಿ |
| | | ಕಾಣಿಯೂರು ಉಪ ಮಾರುಕಟ್ಟೆ | - | ಸಣ್ಣ ಪ್ರಮಾಣದಲ್ಲಿ |
| | | ಈಶ್ವರ ಮಂಗಲ ಉಪ ಮಾರುಕಟ್ಟೆ | - | ಸಣ್ಣ ಪ್ರಮಾಣದಲ್ಲಿ |
| | | ಪಾಣಾಜೆ ಉಪ ಮಾರುಕಟ್ಟೆ | - | ಸಣ್ಣ ಪ್ರಮಾಣದಲ್ಲಿ |
| | | ಕೋಡಿಂಬಾಲ ಉಪ ಮಾರುಕಟ್ಟೆ | - | ಸಣ್ಣ ಪ್ರಮಾಣದಲ್ಲಿ |
| | | ನೆಲ್ಯಾಡಿ ಉಪ ಮಾರುಕಟ್ಟೆ | - | ಸಣ್ಣ ಪ್ರಮಾಣದಲ್ಲಿ |
| 3. | ಬಂಟ್ವಾಳ | ಮುಖ್ಯ ಮಾರುಕಟ್ಟೆ | ಮಾರುಕಟ್ಟೆ ಪ್ರಾಂಗಣ ಇರುವುದಿಲ್ಲ | - |
| | | ವಿಟ್ಲ ಉಪ ಮಾರುಕಟ್ಟೆ | - | ಸಣ್ಣ ಪ್ರಮಾಣದಲ್ಲಿ |
| | | ಮಾಣಿ ಉಪ ಮಾರುಕಟ್ಟೆ | - | ಸಣ್ಣ ಪ್ರಮಾಣದಲ್ಲಿ |
| | | ಗೋಳ್ತಮಜಲು ಉಪ ಮಾರುಕಟ್ಟೆ | - | ಸಣ್ಣ ಪ್ರಮಾಣದಲ್ಲಿ |
| | | ಕನ್ಯಾನ ಉಪ ಮಾರುಕಟ್ಟೆ | - | ಸಣ್ಣ ಪ್ರಮಾಣದಲ್ಲಿ |
| | | ಕೊಳ್ನಾಡು ಉಪ ಮಾರುಕಟ್ಟೆ | - | ಸಣ್ಣ ಪ್ರಮಾಣದಲ್ಲಿ |
| | | ನರಿಕೊಂಬು ಉಪ ಮಾರುಕಟ್ಟೆ | - | ಸಣ್ಣ ಪ್ರಮಾಣದಲ್ಲಿ |
| | | ಮಂಚಿ – ಕುಕ್ಕಾಜೆ ಉಪ ಮಾರುಕಟ್ಟೆ | - | ಸಣ್ಣ ಪ್ರಮಾಣದಲ್ಲಿ |
| | | ಕುರ್ನಾಡು ಉಪ ಮಾರುಕಟ್ಟೆ | - | ಸಣ್ಣ ಪ್ರಮಾಣದಲ್ಲಿ |
| | | ಪಿಲಾತಬೆಟ್ಟು ಉಪ ಮಾರುಕಟ್ಟೆ | - | ಸಣ್ಣ ಪ್ರಮಾಣದಲ್ಲಿ |
| | | ಬಾಳೆಪುಣಿ ಉಪ ಮಾರುಕಟ್ಟೆ | - | ಸಣ್ಣ ಪ್ರಮಾಣದಲ್ಲಿ |
| | | ನರಿಂಗಾನ ಉಪ ಮಾರುಕಟ್ಟೆ | - | ಸಣ್ಣ ಪ್ರಮಾಣದಲ್ಲಿ |
| | | ಚೆನ್ನೈತೋಡಿ ಉಪ ಮಾರುಕಟ್ಟೆ | - | ಸಣ್ಣ ಪ್ರಮಾಣದಲ್ಲಿ |

| | | | | |
|---|---|---|---|---|
| 4. | ಬೆಳ್ತಂಗಡಿ | ಮುಖ್ಯ ಮಾರುಕಟ್ಟೆ | 1000 ಎಂ.ಟಿ ಸಾಮರ್ಥ್ಯ ಗೋದಾಮು-01<br>250 ಎಂ.ಟಿ ಸಾಮರ್ಥ್ಯ ಗೋದಾಮು-02<br>40 ಎಂ.ಟಿ ಸಾಮರ್ಥ್ಯ ಗೋದಾಮು-02<br>ಅಂಗಡಿ ಮಳಿಗಗಳು-05 | ಪೂರ್ಣ ಪ್ರಮಾಣದಲ್ಲಿ ವ್ಯವಹಾರ ನಡೆಯುತ್ತಿದೆ |
| | | ಕೊಕ್ಕಡ ಉಪ ಮಾರುಕಟ್ಟೆ | - | ಸಣ್ಣ ಪ್ರಮಾಣದಲ್ಲಿ |
| | | ವೇಣೂರು ಉಪ ಮಾರುಕಟ್ಟೆ | - | ಸಣ್ಣ ಪ್ರಮಾಣದಲ್ಲಿ |
| | | ಮಡಂತ್ಯಾರು ಉಪ ಮಾರುಕಟ್ಟೆ | - | ಸಣ್ಣ ಪ್ರಮಾಣದಲ್ಲಿ |
| | | ನಾರಾವಿ ಉಪ ಮಾರುಕಟ್ಟೆ | - | ಸಣ್ಣ ಪ್ರಮಾಣದಲ್ಲಿ |
| | | ಅಳದಂಗಡಿ ಉಪ ಮಾರುಕಟ್ಟೆ | - | ಸಣ್ಣ ಪ್ರಮಾಣದಲ್ಲಿ |
| | | ಕರಾಯ- ಕಲ್ಲೇರಿ ಉಪ ಮಾರುಕಟ್ಟೆ | - | ಸಣ್ಣ ಪ್ರಮಾಣದಲ್ಲಿ |
| | | ಉಜಿರೆ ಉಪ ಮಾರುಕಟ್ಟೆ | - | ಸಣ್ಣ ಪ್ರಮಾಣದಲ್ಲಿ |
| | | ಕಕ್ಕಿಂಜೆ ಉಪ ಮಾರುಕಟ್ಟೆ | - | ಸಣ್ಣ ಪ್ರಮಾಣದಲ್ಲಿ |
| 5 | ಸುಳ್ಯ | ಮುಖ್ಯ ಮಾರುಕಟ್ಟೆ ಪ್ರಾಂಗಣ | ವಿವಿಧ ಅಳತೆಯ 27 ಸಂಖ್ಯೆ ಗೋದಾಮುಗಳು, 15 ವಾಣಿಜ್ಯ ಸಂಕೀರ್ಣದ ಕೊಠಡಿಗಳು, 01 ಸಂಖ್ಯೆ ಸಂತೆ ಮಾರುಕಟ್ಟೆ. | ಪೂರ್ಣ ಪ್ರಮಾಣದಲ್ಲಿ ವ್ಯವಹಾರ ನಡೆಯುತ್ತಿದೆ. |
| | ಉಡುಪಿ ಜಿಲ್ಲೆ | | | |
| 1. | ಉಡುಪಿ | ಮುಖ್ಯ ಮಾರುಕಟ್ಟೆ ಪ್ರಾಂಗಣ | ಗೋದಾಮುಗಳು-31<br>ಸಣ್ಣ ಅಂಗಡಿ ಮಳಿಗಗಳು-21<br>ಕ್ಯಾಂಟೀನ್ ಕಟ್ಟಡ-01<br>ಅಂಚೆ ಕಛೇರಿ ಕಟ್ಟಡ-01 | ಪೂರ್ಣ ಪ್ರಮಾಣದಲ್ಲಿ ವ್ಯವಹಾರ ನಡೆಯುತ್ತಿದೆ |
| | | ಕೋಟ ಉಪ ಮಾರುಕಟ್ಟೆ | ಗೋದಾಮುಗಳು-03 | ಸಣ್ಣ ಪ್ರಮಾಣದಲ್ಲಿ |
| | | ಶಿವಳ್ಳಿ ಉಪ ಮಾರುಕಟ್ಟೆ | - | ಸಣ್ಣ ಪ್ರಮಾಣದಲ್ಲಿ |
| 2. | ಕಾರ್ಕಳ | ಮುಖ್ಯ ಮಾರುಕಟ್ಟೆ ಪ್ರಾಂಗಣ | ಗೋದಾಮುಗಳು-27<br>ಸಣ್ಣ ಅಂಗಡಿ ಮಳಿಗಗಳು-14<br>ವಸತಿ ಗೃಹಗಳು-02 | ಪೂರ್ಣ ಪ್ರಮಾಣದಲ್ಲಿ ವ್ಯವಹಾರ ನಡೆಯುತ್ತಿದೆ |
| | | ಹೆಬ್ರಿ ಉಪ ಮಾರುಕಟ್ಟೆ | - | ಸಣ್ಣ ಪ್ರಮಾಣದಲ್ಲಿ |
| | | ಶಿವಪುರ ಉಪ ಮಾರುಕಟ್ಟೆ | - | ಸಣ್ಣ ಪ್ರಮಾಣದಲ್ಲಿ |
| | | ಕುಚ್ಚೂರು ಉಪ ಮಾರುಕಟ್ಟೆ | - | ಸಣ್ಣ ಪ್ರಮಾಣದಲ್ಲಿ |
| 3. | ಕುಂದಾಪುರ | ಮುಖ್ಯ ಮಾರುಕಟ್ಟೆ ಪ್ರಾಂಗಣ | ಗೋದಾಮುಗಳು-32<br>ಸಣ್ಣ ಅಂಗಡಿ ಮಳಿಗಗಳು-20<br>ವಸತಿ ಗೃಹಗಳು-02 | ಪೂರ್ಣ ಪ್ರಮಾಣದಲ್ಲಿ ವ್ಯವಹಾರ ನಡೆಯುತ್ತಿದೆ |

ನಿರ್ದೇಶಕರು